


# ವಸುಮತಿ, ಶಂಕರ ಆಗಮನ

‘ನೀವು ಕೇಳಿದಾಗ್ಲೇ ಸೂರ್ಯನ ಬಗ್ಗೆ ಹೇಳಿದ್ದರೆ ಇದಕ್ಕೆಲ್ಲಾ ಆಸ್ಪದವೇ ಇರುತ್ತಿರಲಿಲ್ಲವೇನೋ..ನಾನು ಅತಿರೇಕವಾಗಿ ವರ್ತಿಸಿದೆ.. ಸೂರ್ಯನ ಬಗ್ಗೆ ನಿಮ್ಗೆ ತಿಳಿದಿದೆಯೋ ಇಲ್ಲವೋ.. ನಾನಾಗಿ ಹೇಳುವುದು ಉಚಿತವಲ್ಲ ಎನಿಸಿ ಗುಟ್ಟು ಮಾಡಲು ಯತ್ನಿಸಿದೆ.. ಅದು ನಿಮ್ಮ ಸಂದೇಹಕ್ಕೆ ಕಾರಣವಾಯಿತು..ಆದದ್ದು ಆಗಿ ಹೋಯಿತು..ನೀವೂ ನನ್ನನ್ನು ಕ್ಷಮಿಸಿ ಡಾಕ್ಟರ್..’ ಎಂದು ನಕ್ಕಳು ಅಪೂರ್ವ. ಅವಳ ತಿಳಿ ನಗೆ ಕಂಡು ಅವನ ಮನಸ್ಸಿಗೆ ತಂಪೆರಚಿದಂತಾಯಿತು.

‘ಓಹ್..! ಕಡೆಗೂ ನಕ್ಕರಲ್ವಾ.. ನಿನ್ನೆ ರಾತ್ರೆಯಿಂದ ತುಂಬಾ ಡಿಸ್ಟರ್ಬ್ ಆಗಿದ್ದೆ.. ಸರಿಯಾಗಿ ನಿದ್ದೆ ಕೂಡಾ ಮಾಡಿಲ್ಲಾ.. ರಾತ್ರೆಯಿಡೀ.. ನಿಮ್ದೇ ಯೋಚನೆ..’ ಎಂದವನು ನಾಲಿಗೆ ಕಚ್ಚಿಕೊಂಡ, ‘ಮಿಸ್ಟೇಕ್ ಮಾಡ್ಕೋಬೇಡಿ.. ನನ್ನ ಮಾತಿನರ್ಥ ಬೇರೆ.. ಆಂದ್ರೆ... ನಿಮ್ಮ ಮನಸ್ಸಿಗೆ ನೋವುಂಟಾಗಲು ನಾನು ಕಾರಣನಾದೆನಲ್ಲಾ ಅಂತ ರಾತ್ರೆಯೆಲ್ಲಾ ಪರಿತಪಿಸ್ತಾ ಇದ್ದೆ.. ಈಗ ಸಮಾಧಾನವಾಯಿತು ನೋಡಿ..ಈಗ ನಿಮ್ಮ ಮನಸ್ಸಲ್ಲಿ ಏನೂ ಕಹಿ ಇಲ್ಲ ತಾನೇ..?’